ಕಡಲ ದೋಣಿಯಲ್ಲಿ ಹೊಳೆ ದಾಟುತ್ತಿದ್ದ ಸಂದರ್ಭದಲ್ಲಿ ದೋಣಿ ದುರಂತದಿಂದ ಸುಲೋಚನ (ಸಂಜೀವ ಪೂಜಾರಿಯವರ ಮಗಳು), ಸುಲೋಚನ (ಕಮಲ ಪೂಜಾರಿಯವರ ಮಗಳು ಹಾಗೂ ದೇವಕಿ (ಜಗನ್ನಾಥ ಪಾಲರವರ ಗಳು) ಇವರುಗಳು ಮೃತಪಟ್ಟಿರುತ್ತಾರೆ. ಈ ದುರಂತದಲ್ಲಿ ಇತರೆ ಪ್ರಯಾಣಿಕರು ಪಾರಾಗಿದ್ದಾರೆ. ಈ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಅಧಿಕಾರಿಗಳಿಗೆ ಎಲ್ಲಾ ವಿವರ ಹಾಗೂ ದಾಖಲೆಗಳನ್ನು ಸಲ್ಲಿಸಲಾಗಿದೆ. ಸಂತ್ರಸ್ತ ಕುಟುಂಬದವರು ತೀರಾ ಬಡವರಾಗಿದ್ದು ಇವರಿಗೆ ಯಾವೊಂದು ಪರಿಹಾರವನ್ನು ಸರ್ಕಾರದಿಂದ ದೊರಕಿರುವುದಿಲ್ಲ. ಇಂಥಹ ದುರಂತ ಬೇರೆ ಜಿಲ್ಲೆಯಲ್ಲಿ ನಡೆದಾಗ ಸಂತ್ರಸ್ತ ಕುಟುಂಬಕ್ಕೆ ತಲಾ ಒಂದು ಲಕ್ಷದಂತೆ ಪರಿಹಾರವನ್ನು ಈ ಹಿಂದಿನ ಸರ್ಕಾರ ನೀಡಿದೆ. ಈ ವಿಚಾರವನ್ನು ಸರ್ಕಾರ ಕೂಡಲೇ ಪರಿಶೀಲಿಸಿ ನೊಂದ ಕುಟುಂಬಗಳಿಗೆ ವಿಳಂಬವಿಲ್ಲದೆ ಪರಿಹಾರವನ್ನು ಮಂಜೂರು ಮಾಡುವಂತೆ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಆರ್.ಎಲ್.ಜಾಲಪ್ಪ(ಕಂದಾಯ ಸಚಿವರು) ಮಾನ್ಯ ಅಧ್ಯಕ್ಷರೆ, ಮೃತಪಟ್ಟವರ ಹೆಸರುಗಳನ್ನು ಮಾನ್ಯ ಸದಸ್ಯರೇ ಹೇಳಿರುವುದರಿಂದ ಅದನ್ನು ಪುನ: ನಾನು ಹೇಳುವ ಅವಶ್ಯಕತೆ ಇಲ್ಲ. ದೋಣಿ ಚಾಲಕನಾಗಿದ್ದ ಯೋಗಿಶ್ ಪಾಂಡು ಕೆದಿಲಾಯ, 22 ವರ್ಷ ಅವನಿಗೆ, ಅವನ ನಿರ್ಲಕ್ಷ್ಯ ತನದಿಂದ ಈ ದುರಂತ ನಡೆದಿದೆಯೆಂದು ಈಗಾಗಲೇ ಪೋಲೀಸರು ಅವನ ಮೇಲೆ ಸೆಕ್ಷನ್ 280, 304 ಎ ಮೇಲೆ ಮೊಕದಮೆ ಹೂಡಿದ್ದಾರೆ. ಈ ಘಟನೆ ಪ್ರಕೃತಿ ವಿಕೋಪದ ಅಡಿಯಲ್ಲಿ ಬರುವುದಿಲ್ಲವಾದ್ದರಿಂದ ಅವನಿಗೆ ಯಾವುದೇ ರೀತಿಯ ಪರಿಹಾರ ಕೊಡುವುದಕ್ಕೆ ಸಾಧ್ಯವಿಲ್ಲ. ಅವನ ಮೇಲೆ ಪೋಲೀಸ್ ಕೇಸ್ ಇದೆ. ಅದರ ಮೇಲೆ ಕ್ರಮ ತೆಗೆದುಕೊಳ್ಳಬಹುದು.

(ಇ) ವಿಷಯ : ಬಿಜಾಪು ರನಗರದ ಕುಡಿಯುವ ನೀರಿನ ಸಮಸ್ಯೆಯಿಂದ ಜನರಿಗೆ ತೊಂದರೆ

ಶ್ರೀ ಬಸವನಗೌಡ ಪಾಟೀಲ್ (ಬಸವನ ಬಾಗೇವಾಡಿ) : ಸನ್ಮಾನ್ಯ ಅಧ್ಯಕ್ಷರೇ, ವಿದ್ಯುತ್ ಅಭಾವ ಮತ್ತು ಕಡಿಮೆ ಓಲ್ಟೇಂ ಜ್‌ನಿಂದಾಗಿ ಬಿಜಾಪುರ ನಗರದ ಕುಡಿಯುವ ನೀರಿನ ವ್ಯವಸ್ಥೆಗೆ ತೀವ್ರತೊಂದರೆಯಾಗಿ ಐದಾರು ದಿನಗಳಿಗೊಮ್ಮೆ ನಗರದಲ್ಲಿ ನೀರು ಬರುವಂತಾಗಿದೆ. ಇದರಿಂದಾಗಿ ಸಾರ್ವಜನಿಕರಿಗೆ ಬಹಳ ತೊಂದರೆಯಾಗಿರುತ್ತದೆ. ಆದುದರಿಂದ ಮಾನ್ಯ ವಿದ್ಯುತ್ ಸಚಿವರು ಈ ಬಗ್ಗೆ ಸಂಬಂಧಪಟ್ಟ ಕೆ.ಇ.ಬಿ. ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ಕೊಟ್ಟು ತೊಂದರೆಯನ್ನು ನಿವಾರಿಸಬೇಕು ಹಾಗೂ ವಿಶೇಷವಾಗಿ ಪಂಪ್ ಹೌಸ್‌ಗಳಿಗೆ 24 ಗಂಟೆಗಳ ಕಾಲವೂ ನಿರಂತರವಾಗಿ ನೀರು ಸರಬರಾಜು ಮಾಡುವಂತೆ ಸೂಕ್ತ ಆದೇಶ ನೀಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ಎಲ್.ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪ್ರಸ್ತಾಪಿಸಿದ ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತಂದು ಅವರಿಗೆ ಉತ್ತರವನ್ನು ದೊರಕಿಸಿ ಕೊಡುತ್ತೇನೆ.